<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>

<u>Spl.C.134/2022</u>

ದಿಃ 04.01.2024
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-5 Pw-5

| | | |
|---|---|---|
| ಹೆಸರು | ಃ | ದುರ್ಗಿಬಾಯಿ |
| ಗಂಡನ ಹೆಸರು | ಃ | ಸಕ್ರಿಯಾ ನಾಯ್ಕ |
| ವಯಸ್ಸು | ಃ | 81 ವರ್ಷ |
| ಉದ್ಯೋಗ | ಃ | ಏನೂ ಇಲ್ಲ |
| ವಾಸಸ್ಥಳ | ಃ | ವಿರುಪಸಂದ್ರ |

**<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

1. ನನಗೆ ಚಾಸಾಃ1 ರಿಂದ 4 ಮತ್ತು 6 ರಿಂದ 8 ಗೊತ್ತು.

2. ನಾವು ಹಿಂದೂ ಲಂಬಾಣಿಜಾತಿಗೆ ಸೇರಿದವರಾಗಿರುತ್ತೇವೆ.

3. ಈಗ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರು ಒಕ್ಕಲಿಗ ಜಾತಿಗೆ ಸೇರಿದವರು ಎಂದು ನನಗೆ ಗೊತ್ತು.

4. ಈಗ ಸುಮಾರು ಒಂದು ವರ್ಷದ ಹಿಂದೆ ಭಾನುವಾರ ದಿನದಂದು ರಾತ್ರಿ ಸುಮಾರು 9 ಗಂಟೆ ಸಮಯದಲ್ಲಿ ಚಾಸಾಃ1 ಮತ್ತು 2 ಇವರು ತಮ್ಮ ಮನೆಯಲ್ಲಿ ಊಟ ಮಾಡುತ್ತಿದ್ದಾಗ ಆರೋಪಿತರು ಅಲ್ಲಿಗೆ ಬಂದು ಅವರೊಂದಿಗೆ ಜಗಳ ಕಾಯ್ದು ಕೈಯಿಂದ ಹಣೆಗೆ, ಮೂಗಿಗೆ, ಕೈಗೆ ಹಲ್ಲೆ ನಡೆಸಿ ಚಾಸಾಃ 2 ಈತನ ಬಟ್ಟೆಯನ್ನು ಹರಿದಿರುತ್ತಾರೆ.

5. ಆ ಸಮಯದಲ್ಲಿ ಆರೋಪಿತರ ಚಾಸಾಃ1 ಮತ್ತು 2 ಇವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ.

6. ಆ ಸಮಯದಲ್ಲಿ 3 ನೇ ಅರೋಪಿತನು ಬಂದು ಜಗಳವನ್ನು ಬಿಡಿಸಿರುತ್ತಾನೆ.

7. ಚಾಸಾಃ1 ಮತ್ತು 2 ಇವರು ನಂತರ ಆಸ್ಪತ್ರೆಗೆ ಹೋಗಿರುತ್ತಾರೆ.

8. ಚಾಸಾಃ2 ಈತನ ಷರ್ಟನ್ನು ಈಗ ನೋಡಿ ನನಗೆ ಗುರುತಿಸಲು ಆಗುವುದಿಲ್ಲ.

9. ಇಷ್ಟನ್ನು ಹೊರತುಪಡಿಸಿ ನಾನು ಪೊಲೀಸರ ಮುಂದೆ ಬೇರಾವ ವಿಚಾರವನ್ನು ಹೇಳಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ. ಅದರಂತೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ವಿಶೇಷ ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

10. ಗಲಾಟೆ ಸಮಯದಲ್ಲಿ ಆರೋಪಿತರು ಚಾಸಾಃ1 ಮತ್ತು 2 ಇವರಿಗೆ ಲಂಬಾಣಿ ಕೀಳು ಜಾತಿಯ ಜನರಾದ ನೀವು ಊರು ಬಿಟ್ಟು ಹೋಗಬೇಕು ಎಂದು ಬೈದು ಹೆದರಿಸಿರುತ್ತಾರೆ ಎಂದರೆ ಅದನ್ನು ನಾನು ಗಲಾಟೆಯಲ್ಲಿ ಕೇಳಿಸಿಕೊಂಡಿರುವುದಿಲ್ಲ ಎಂದು ಹೇಳುತ್ತೇನೆ.

11. ಸದರಿ ವಿಚಾರವನ್ನು ನಾನು ಪೊಲೀಸರ ಮುಂದೆ ಈಗ ಓದಿ ಹೇಳಿದ ನಿಪಿಃ 6 ರಂತೆ ಹೇಳಿಕೆಯನ್ನು ದಿಃ 24.06.2020 ನೀಡಿರುತೆತೇನೆ ಎಂಬುದು ಸರಿಯಲ್ಲ.

12. ಆರೋಪಿತರು ಚಾಸಾಃ1 ಮತ್ತು 2 ಇವರಿಗೆ ಕೊಲೆ ಮಾಡುತ್ತೇವೆ ಎಂದು ಹೆದರಿಸಿರುತ್ತಾರೆ ಎಂಬುದು ಸರಿ.

13. ಆಗ ಚಾಸಾಃ 3 ಮತ್ತು 4 ಜಗಳ ನೋಡಿ ಬಿಡಿಸಿರುತ್ತಾರೆ ಎಂಬುದು ಸರಿಯಲ್ಲ.

14. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಈಗ ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

**<u>ಪಾಟೀ ಸವಾಲುಃ ಶ್ರೀ. ಎಂ ಕೆ ಎನ್ ವಕೀಲರಿಂದ 2 ಮತ್ತು 3ನೇ ಆರೋಪಿಗಳ ಪರವಾಗಿಃ</u>**

15. ನಮ್ಮ ಬೀದಿಯಲ್ಲಿ ಎಲ್ಲಾ ಜನಾಂಗದ ಜನರು ವಾಸ ಮಾಡುತ್ತಿದ್ದೇವೆ ಎಂದರೆ ಸರಿ.

16. ಮೊದಲಿನಿಂದಲೂ ನಾವು ನಮ್ಮ ಬೀದಿಯಲ್ಲಿನ ಎಲ್ಲಾ ಜನರೊಂದಿಗೆ ಯಾವುದೇ ತಂಟೆ ತಕರಾರು ಇಲ್ಲದೇ ಅನ್ಯೋನ್ಯವಾಗಿ ಇರುತ್ತೆವೆ ಎಂದರೆ ಸರಿ.

17. ಆ ದಿನ ರಾತ್ರಿ 9 ಗಂಟೆ ಸಮಯದಲ್ಲ ಯಾವುದೇ ಬೆಳಕು ಇಲ್ಲದೆ ಕಗ್ಗತ್ತಲೆ ಇತ್ತು.

18. ಕತ್ತಲೆ ಇದ್ದುದರಿಂದ ಯಾರು ಏನು, ಎಂತು ಎಂದು ಕಾಣಿಸುತ್ತಿರಲಿಲ್ಲ ಎಂದರೆ ಸರಿ.

19. ನಾನು ನಮ್ಮ ಮನೆಯ ಹತ್ತಿರ ಕುಳಿತುಕೊಂಡಾಗ ಯಾರಾದರೂ ಕೂಗಾಟ ಮಾಡಿದರು ಸಹ ನನಗೆ ವಯೋಸಹಜ ರೀತಿಯಿಂದ ನನ್ನ ಕಿವಿಗಳು ಮಂದಾಗಿರುವ ಕಾರಣ ಕೇಳಿಸುವುದಿಲ್ಲ ಎಂಬುದು ಸರಿ.

20. ಆ ಸಮಯದಲ್ಲಿ ನಮ್ಮ ಬೀದಿಯಲ್ಲಿನ ಯಾವುದೇ ಜನರು ಅಲ್ಲಿ ಬಂದಿರಲಿಲ್ಲ ಎಂದರೆ ಸರಿ.

21. ಈಗ ಸುಮಾರು ಒಂದು ವರ್ಷದ ಹಿಂದೆ ಭಾನುವಾರ ದಿನದಂದು ರಾತ್ರಿ ಸುಮಾರು 9 ಗಂಟೆ ಸಮಯದಲ್ಲಿ ಚಾಸಾಃ1 ಮತ್ತು 2 ಇವರು ತಮ್ಮ ಮನೆಯಲ್ಲಿ ಊಟ ಮಾಡುತ್ತಿದ್ದಾಗ ಆರೋಪಿತರು ಅಲ್ಲಿಗೆ ಬಂದು ಅವರೊಂದಿಗೆ ಜಗಳ ಕಾಯ್ದು ಕೈಯಿಂದ ಹಣೆಗೆ, ಮೂಗಿಗೆ, ಕೈಗೆ ಹಲ್ಲೆ ನಡೆಸಿ ಚಾಸಾಃ 2 ಈತನ ಬಟ್ಟೆಯನ್ನು ಹರಿದಿರುತ್ತಾರೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

22. ಆ ಸಮಯದಲ್ಲಿ ಆರೋಪಿತರ ಚಾಸಾಃ1 ಮತ್ತು 2 ಇವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

23. ಆ ಸಮಯದಲ್ಲಿ 3 ನೇ ಅರೋಪಿತನು ಬಂದು ಜಗಳವನ್ನು ಬಿಡಿಸಿರುತ್ತಾನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

24. ಚಾಸಾಃ1 ಮತ್ತು 2 ಇವರು ನಂತರ ಆಸ್ಪತ್ರೆಗೆ ಹೋಗಿರುತ್ತಾರೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

25. ಚಾಸಾಃ3 ಮತ್ತು 6 ರಿಂದ 8 ನನ್ನ ಜಾತಿ ಬಂಧುಗಳು ಎಂಬುದು ಸರಿ.

26. ಚಾಸಾಃ 2 ಈತನು ಮಾವಿನ ಕೊಯ್ಯಲು ಕೂಲಿ ಕೆಲಸಕ್ಕೆ ಹೋಗುತ್ತಾನೆ ಎಂಬುದು ಸರಿ.

27. ಆರೋಪಿತರು ಚಾಸಾಃ1 ಮತ್ತು 2 ಇವರಿಗೆ ಕೊಲೆ ಮಾಡುತ್ತೇವೆ ಎಂದು ಹೆದರಿಸಿರುತ್ತಾರೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

28. ಚಾಸಾಃ1 ಮತ್ತು 2 ಇವರು ನನ್ನ ಸಂಬಂಧಿಕಾರಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ,ಎಂದು ಸೂಚಿಸುವುದು ಸರಿಯಲ್ಲ.

**ಪಾಟೀ ಸವಾಲುಃ ಶ್ರೀ. ಎಸ್ ಎನ್ ವಕೀಲರಿಂದ 1ನೇ ಆರೋಪಿತನ ಪರವಾಗಿಃ ಮೇಲಿನ ಪಾಟೀ ಸವಾಲನ್ನೆ ಅಳವಡಿಸಿಕೊಂಡಿರುತ್ತಾರೆ.**

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.